೧೨ ಬ್ರಹ್ಮಾವರ ಕೋಟದಲ್ಲಿರುವ ಮಣೂರು ಫಿಶರೀನ್ ರಸ್ತೆ ದುರಸ್ತಿಯಲ್ಲಿರುವುದು.

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಬ್ರಹ್ಮಾವರ ಕೋಟದಲ್ಲಿರುವ ಮಣೂರು ಫಿಶರೀನ್ ರಸ್ತೆಯು ಈಗ ಬಹಳ ದಿನಗಳಿಂದ ದುರಸ್ತಿಯಿಲ್ಲದೆ ಹಾಳಾಗಿರುತ್ತದೆ. ಹಳ್ಳಿ ರಸ್ತೆಯಾದ ಇದರಲ್ಲಿ ೧೫ ಟನ್ನಿಗೂ ಮಿಕ್ಕಿದ ಲೋಡಿನ ಲಾರಿಗಳು ತಿರುಗಾಡುವುದರಿಂದ ಈ ರಸ್ತೆಯು ಇನ್ನಷ್ಟು ಕೆಟ್ಟಿರುತ್ತದೆ. ಆದುದರಿಂದ ಈ ರಸ್ತೆಯನ್ನು ಕೂಡಲೇ ರಿಪೇರಿ ಮಾಡಿಸಬೇಕು ಮತ್ತು ಅಧಿಕ ಭಾರದ ಲಾರಿಗಳು ಈ ರಸ್ತೆಯಲ್ಲಿ ತಿರುಗದಂತೆ ಕ್ರಮ ತೆಗೆದುಕೊಳ್ಳಬೇಕು. ತಪ್ಪಿದಲ್ಲಿ ಈ ರಸ್ತೆಯನ್ನು ಆ ಭಾರದ ಲಾರಿಗಳಿಗೆ ಅನುಕೂಲವಾಗುವಂತೆ ಪರಿವರ್ತಿಸಬೇಕೆಂದು ಮಣೂರು ಗ್ರಾಮಪಂಚಾಯತ್ ಸದಸ್ಯರು ಸಚಿವರಿಗೆ ತಂತಿ ಮುಖೇನ ವಿನಂತಿಸಿಕೊಂಡಿದ್ದು ಆ ಕುರಿತು ಮಾನ್ಯ ಸಚಿವರು ಕೂಡಲೇ ಕ್ರಮ ತೆಗೆದುಕೊಳ್ಳಬೇಕಾಗಿ ನಿಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಶ್ರೀ ವೀರಣ್ಣ.—ಈ ಬಗ್ಗೆ ಮಾನ್ಯ ಸದಸ್ಯರಿಗೆ ಉತ್ತರ ತಿಳಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

೧೩ ವಿಮಾಸಲಾತಿ ಹುದ್ದೆಗಳಿಗೆ ವರಮಾನದ ಮಿತಿಯನ್ನು ವಿಧಿಸಂವುದು

ಶ್ರೀ ಬಿ. ಸ್ವಾಮಿರಾವ್ (ಜೊಸನಗರ).—ಮಾನ್ಯ ಅಧ್ಯಕ್ಷರೇ, ೧೯೭೦–೭೧ರಲ್ಲಿ ರೂ. ೬೪೧ ರಷ್ಟಿದ್ದ ರಾಜ್ಯದ ತಲಪಾರು ಆದಾಯವು ೧೯೮೫–೮೪ರಲ್ಲಿ ರೂ ೧೯೬೦ಕ್ಕೆ ಏರಿರುವುದರಿಂದ ಈ ಅವಧಿಯಲ್ಲಿ ರಾಜ್ಯದ ತಲಪಾರು ಆದಾಯವು ಶೇಕಡಾವಾರು ೨೦೬ರಷ್ಟು ಹೆಚ್ಚಾಗಿದೆಯೆಂದು ರಾಜ್ಯದ ೧೯೮೬–೮೭ರ ವಾರ್ಷಿಕ ಯೋಜನಾ ವರದಿಯಲ್ಲಿ ವರದಿ ಮಾಡಲಾಗಿದೆ. ೧೯೬೩ರಿಂದ ಈತನಕ ಪುನಃ ತಲವಾರು ಆದಾಯದಲ್ಲಿ ಹೆಚ್ಚಳವುಂಟಾಗಿದೆ. ವಿವಿಧ ಹುದ್ದೆಗಳಿಗೆ ಮೀಸಲಾತಿಗಾಗಿ ವರಮಾನದ ಮಿತಿಯನ್ನು ವಿಧಿಸಿ ಈಗ್ಗೆ ೮ ವರ್ಷಗಳ ಹಿಂದೆ ಅಂದರೆ ೧೯೭೮ರಲ್ಲಿಯೇ ಆಜ್ಞೆ ಹೊರಡಿಸಲಾಗಿದ್ದು, ಹಿಂದುಳಿದ ವರ್ಗ, ಹಿಂದುಳಿದ ಕೋಮು ಹಾಗೂ ಹಿಂದುಳಿದ ವಿಶೇಷ ವರ್ಗಗಳಿಗೆ ವರಮಾನದ ಮಿತಿಯನ್ನು ೧೦,೦೦೦ ರೂಪಾಯಿಗಳಿಗೆ ನಿಗದಿಗೊಳಿಸಲಾಗಿತ್ತು. ಹೀಗೆ ವರಮಾನವನ್ನು ನಿಗದಿ ಮಾಡಿರುವಾಗ ಆದಿನ ವಾರ್ಷಿಕ ವರಮಾನ ಬೆಲೆ ಸೂಚ್ಯಂಕಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿತ್ತು.

ಅನಂತರ ದಿನಗಳಲ್ಲಿನ ಬೆಲೆ ಸೂಚ್ಯಂಕದ ಏರಿಕೆ ಹಾಗೂ ಸಂಬಳಸಾರಿಗೆಗಳ ಪುನರ್ವಿಮರ್ಶೆಯಿಂದಾಗಿ ಸಿ ಹಾಗೂ ಡಿ ದರ್ಜೆ ನೌಕರರ ಸಂಬಳವೂ ಸಹ ಮಾಸಿಕವಾಗಿ ೧೦೦೦ ರೂಗಳಿಗೆ ಮೀರುವುದರಿಂದ ಅತ್ಯಂತ ಕೆಳಮಟ್ಟದ ಅಂದರೆ ಡಿ ದರ್ಜೆ ನೌಕರರ ಮಕ್ಕಳೂ ಸಹ ಸಾಮಾನ್ಯ ವರ್ಗದ ಗುಂಪಿಗೆ ಸೇರುವ ಪರಿಸ್ಥಿತಿ ಉಂಟಾಗಿದೆ. ಇದನ್ನು ಪರಿಗಣಿಸಿದ ಶ್ರೀ ವೆಂಕಟಸ್ವಾಮಿ ಆಯೋಗವು ವರಮಾನದ ಮಿತಿಯನ್ನು ಪುನರ್ವಿಮರ್ಶಿಸಲು ಸೂಚಿಸಿದೆ ಎಂದು ತಿಳಿದು ಬಂದಿದೆ. ಆದುದರಿಂದ ವರಮಾನದ ಮಿತಿಯನ್ನು ಪರಿಷ್ಕರಿಸಿ ನಿಗದಿಪಡಿಸಲಾಗಿದೆ.

ಈಗಾಗಲೇ 'ಎ' ಮತ್ತು 'ಬಿ' ಶ್ರೇಣಿಯ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿ ಸ್ವೀಕರಿಸಲು ಕಡೆಯ ದಿನವೆಂದು ೧೬–೧೧–೮೭ ಎಂದು ನಿಗದಿಗೊಳಿಸಲಾಗಿದೆ. ಆದ್ದರಿಂದ, ತಕ್ಷಣ ವರಮಾನದ ಮಿತಿಯನ್ನು ಪುನರ್ನಿಗದಿಪಡಿಸಬೇಕು ಹಾಗೂ ಅರ್ಜಿ ಸಲ್ಲಿಸಲು ಕಡೆಯ ದಿನಾಂಕವನ್ನು ಮುಂದೂಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು ವೇಲ್ಮನೆಯಲ್ಲಿದ್ದಾರೆ. ಅವರು ಇಲ್ಲಿಗೆ ಬಂದಾಗ, ಈ ವಿಚಾರವನ್ನು ಅವರಿಗೆ ತಿಳಿಸಿ, ಇದಕ್ಕೆ ಉತ್ತರವನ್ನು ಮಾನ್ಯ ಸದಸ್ಯರಿಗೆ ಕೊಡಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ನೀಲಕಂಠಗೌಡ ವಿ. ಪಾಟೀಲ್ ಅವರು ಈಗ ಸಭೆಯಲ್ಲಿ ಇಲ್ಲದಿರುವ ಕಾರಣ ಶ್ರೀ ನೀಲಕಂಠಪ್ಪನವರು ಈಗ ನಿಯಮ ೩೫೪ರ ಕೆಳಗೆ ಕೊಟ್ಟಿರುವ ನೋಟೀಸ್‌ನ ವಿಷಯದ ಬಗ್ಗೆ ಮಾನ್ಯ ಸಚಿವರ ಗಮನವನ್ನು ಸೆಳೆಯಬಹುದು.